ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 98-103**
**©*IIMRD*, Mysuru**
IIMRD JOURNALS
**www.iimrd.com**

# ಚೆನ್ನಣ್ಣ ವಾಲೀಕಾರರ ಕಾದಂಬರಿಗಳಲ್ಲಿ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು

**ದೇವರಾಜ್ ಹನುಮಂತಪ್ಪ ಚಲವಾದಿ***

* ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ* (Abstract)**

*ಹೊಸಗನ್ನಡ ಸಾಹಿತ್ಯದ ಗಮನಾರ್ಹ ಪ್ರಕಾರಗಳಲ್ಲಿ ಕಾದಂಬರಿ ಮಹತ್ವದಾಗಿದೆ. ಬದುಕಿನ ಆಗುಹೋಗುಗಳ ಆಕಸ್ಮಿಕ ಬದಲಾವಣೆಗಳ, ವಾಸ್ತವ ಜಗತ್ತಿನ ತಲ್ಲಣಗಳ, ಕಲ್ಪನಾ ಜಗತ್ತಿನ ರಂಜನೆಗಳ ಕುರಿತು ಕಾದಂಬರಿಯಲ್ಲಿ ಒಳನೋಟಗಳಿವೆ. ಸೃಜನಶೀಲ ಲೇಖಕನಿಗೆ ಕಾದಂಬರಿ ಪ್ರಯೋಗಶಾಲೆಯಾಗಿದೆ, ಜಗತ್ತಿನಲ್ಲಿ ಘಟಿಸಿದ ಘಟನೆಗಳು ದೇಶ, ರಾಜ್ಯ, ನಗರ– ಗ್ರಾಮೀಣ ಪ್ರದೇಶಗಳಲ್ಲಿ ಘಟಿಸುವ ಘಟನೆಗಳು ಉಲ್ಲಾಸ, ಉತ್ಸಾಹ, ಶೃಂಗಾರ, ರುದ್ರ, ವೀರ, ಹಾಸ್ಯ ಮೊದಲಾದ ನವರಸಗಳಿಗೆ ಹಾಗು ವಾಸ್ತವದ ಘಟನೆಗಳಿಗೆ ಕನ್ನಡಿ ಹಿಡಿಯುತ್ತವೆ. ಅನುಭವದ ಜೊತೆಗೆ ಕಲ್ಪನೆಯು ಮಿಳಿತಗೊಂಡು ಕಾದಂಬರಿ ಅನಭಿಶಕ್ತ ದೊರೆಯಾಗಿ ಶೋಭಿಸುತ್ತದೆ. ಕಾದಂಬರಿ ಭಾವನೆಗಳ ಕಲಸು ಮೇಲೋಗರವಾಗಿ ವಿಮರ್ಶಕರ ಅಲೆಗಳಿಗೆ ಒಳಗಾದರು ಅದು ಸಮಕಾಲೀನ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಪ್ರಸ್ತುತ ಲೇಖನದಲ್ಲಿ ಕನ್ನಡದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಚೆನ್ನಣ್ಣ ವಾಲೀಕಾರ ಅವರ ಕಾದಂಬರಿಗಳಲ್ಲಿ ಕಂಡುಬರುವ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳನ್ನು ವಿಮರ್ಶಿಸಲಾಗಿದೆ.*

***ಮುಖ್ಯಪದಗಳು* (Keywords):** ಚೆನ್ನಣ್ಣ ವಾಲೀಕಾರ, ಪ್ರಭುತ್ವ, ಪ್ರತಿರೋಧ, ಬಂಡಾಯ ಸಾಹಿತ್ಯ, ಸಮಾನತೆ, ಸ್ತ್ರೀವಾದ.

## ಪೀಠಿಕೆ

ಹೈದರಾಬಾದ್–ಕರ್ನಾಟಕದ ಗಮನಾರ್ಹ ಕಾದಂಬರಿಕಾರರಲ್ಲಿ ಡಾ.ಚೆನ್ನಣ್ಣ ವಾಲಿಕಾರ್ ತಮ್ಮ ಬಂಡಾಯದ ಧೋರಣೆಯಿಂದ ಪ್ರಮುಖರಾಗಿದ್ದಾರೆ. ಚೆನ್ನಣ್ಣ ವಾಲೀಕಾರ ಮುಗ್ಧ ಮನಸ್ಸು ತನ್ನ ಜನಾಂಗದ ನೋವು ತಲ್ಲಣಗಳಿಗೆ ಮಿಡಿದಿದೆ ಅವರು Jack of all trodes, master of none, ಆಗಬಾರದೆಂಬ ಧೋರಣೆ ಹೊಂದಿದ್ದಾರೆ. ಯಾವುದಾದರೂ ಕ್ಷೇತ್ರದಲ್ಲಿ ಗಟ್ಟಿಯಾಗಿ ನೆಲೆಯೂರಿ ಸಾಧನೆ ಮಾಡಬೇಕೆಂಬುದು ಅವರ ಅಭಿಪ್ರಾಯವಾಗಿದೆ. ರಾಜಶೇಖರ ನೀರಮಾನ್ವಿ, ಕುಂಬಾರ ವೀರಭದ್ರಪ್ಪ ಕತೆಗಾರರಿಂದ ಪಡೆದುಕೊಂಡು ವಾಲೀಕಾರರು ಯಶವಂತ್ ಚಿತ್ತಾಲ, ಯು.ಆರ್. ಅನಂತಮೂರ್ತಿ,

*Please cite this article as: ದೇವರಾಜ್ ಹನುಮಂತಪ್ಪ ಚಲವಾದಿ. (2021).* ಚೆನ್ನಣ್ಣ ವಾಲೀಕಾರರ ಕಾದಂಬರಿಗಳಲ್ಲಿ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 98–103.*

ಪೂರ್ಣಚಂದ್ರ ತೇಜಸ್ವಿ ಅವರ ಬರವಣಿಗೆಯನ್ನು ಗಮನಿಸಿದ್ದಾರೆ. ಅವರು ಹೇಳುವಂತೆ "ನಾನು ಪಟ್ಟಣದ ನಿವಾಸಿಯಾದರೂ ನನ್ನ ಹಳ್ಳಿಯ ಅನುಭವಗಳಿಗೆ ಪ್ರಾಮಾಣಿಕವಾಗಿ ಬರೆಯುವಷ್ಟು ಪಟ್ಟಣದ ಅನುಭವಗಳಿಗೆ ಬರೆಯಲಾರೆ" ಎಂಬ ಮಾತು ಅವರ ನಿಲುವನ್ನು ಸ್ಪಷ್ಟ ಪಡಿಸುತ್ತದೆ. ಸಾಹಿತ್ಯ ಭಾವನೆಗಳು ಹುಟ್ಟಿದಾಗ, ಸನ್ನಿವೇಶಗಳು ಕಾಡಿದಾಗ, ಬೆಂಕಿ ಕೆಂಡದ ಹಾಗೆ ದಗದಗಿಸುವ ಸಂದರ್ಭದಲ್ಲಿ ಹುಟ್ಟುವ ಕ್ರಿಯೆ ಎನ್ನುವ ವಾಲೀಕಾರರು ತನ್ನ ಜನತೆಯ ಸುಖ–ದುಃಖ ನೋವುಗಳಿಗೆ ಸ್ಪಂದಿಸುವ ಜವಾಬ್ದಾರಿಯಿಂದ ಬರೆಯಬೇಕು ಎನ್ನುತ್ತಾರೆ. ಸಮಾಜವಾದಿ ನಾಟಕಗಳು ಬೆಳ್ಳ, ಹುಲಿಗೆಮ್ಮ, ಕಾದಂಬರಿಗಳು ಅವರ ಸಾಹಿತ್ಯಕ್ಕೆ ಸತ್ವವನ್ನು ಎತ್ತಿ ತೋರುತ್ತವೆ. ಕಾದಂಬರಿಗಳು ವಸಹಾತುಶಾಹಿ, ಸಾಮ್ರಾಜ್ಯಶಾಹಿ, ಪುರೋಹಿತಶಾಹಿ, ಹಿತಾಸಕ್ತಿಗಳನ್ನು ಗಮನಕ್ಕೆ ತರುತ್ತವೆ. ಪ್ರಭುತ್ವ ವ್ಯವಸ್ಥೆಯ ತಲ್ಲಣಗಳು ಒಂದೆಡೆಯಾದರೆ ಪ್ರಜಾಪ್ರಭುತ್ವದ ಒಳಬೇಗುದಿಗಳು ಇನ್ನೊಂದೆಡೆ ಯಾಗಿ ರಾಜಕಾರಣಿಗಳು ತಂದಿರುವ ತಲ್ಲಣಗಳು ಓದುಗರ ಚಿತ್ರ ಬಿತ್ತಿಯ ಮೇಲೆ ಪರಿಣಾಮವನ್ನು ಬೀರುತ್ತವೆ. ಹಸಿದವರ ಮತ್ತು ಕಸಿದುಕೊಂಡವರೇ ಬದುಕಿನ ಚಿತ್ರಗಳು ಏಕಕಾಲಕ್ಕೆ ಅನಾವರಣಗೊಂಡು ಶ್ರೀಸಾಮಾನ್ಯರ ಮೇಲೆ ಪ್ರಭಾವವಿರುತ್ತದೆ. ಬರಗೂರು ರಾಮಚಂದ್ರಪ್ಪ" ತಮ್ಮ ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ ನಮ್ಮ ಕಾಲದ ಮನುಷ್ಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು ವಿಭಿನ್ನವಾಗಿವೆ, ಪ್ರಾಚೀನ ಮಧ್ಯಕಾಲೀನ ಸಮಕಾಲಿನ ಸಂದರ್ಭಗಳು ಒಟ್ಟಿಗೆ ಕಾಡುತ್ತಿರುವ ಕಾಲ ನಮ್ಮದಾಗಿದೆ" ಎಂಬುದು ಗಮನಾರ್ಹ. ಕನ್ನಡ ಕಾದಂಬರಿಯ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು ನಮ್ಮ ನಾಗವರ್ಮನ ಕರ್ನಾಟಕ ಕಾದಂಬರಿಯಂತಹ ಕಾವ್ಯಕೃತಿಗಳಲ್ಲಿ ಕಾಣಬಹುದಾದರೂ ಅದರ ಪ್ರೇರಣೆ–ಧೋರಣೆಗಳು ಕಾದಂಬರಿಗಳ ಮಾದರಿಯಲ್ಲಿ ಬೆಳೆದಿರುವುದು ಸಾಮಾನ್ಯವಾಗಿದೆ. ಡೇನಿಯಲ್, ಡಿಪೋ, ಜೊನಾಥನ್ ಎಂಬ ಪಾಶ್ಚಾತ್ಯ ಕಾದಂಬರಿಕಾರರು ನವೋದಯದ ಕಾದಂಬರಿಕಾರರ ಮೇಲೆ ಪ್ರಭಾವ ಬೀರಿದ್ದಾರೆ. ಹೊಸಗನ್ನಡದ ಕಾವ್ಯ, ಕತೆ, ನಾಟಕ ಕಾದಂಬರಿ ಮೊದಲಾದ ಪ್ರಮುಖ ಪ್ರಕಾರಗಳಲ್ಲಿ ಕೆಳವರ್ಗದ ಶ್ರಮ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದಾರೆ. ಸಾರಾ ಅಬೂಬಕ್ಕರ್ ಅವರು ಹೇಳುವಂತೆ ಚೆನ್ನಣ್ಣ ವಾಲೀಕಾರರ ಎಲ್ಲಾ ಕಾದಂಬರಿಗಳು ನಾವು ಈವರೆಗೆ ಕಾಣದೆ ಇರುವಂತಹ ಒಂದು ವಿಶಿಷ್ಟ ಜಗತ್ತನ್ನು ನಮ್ಮ ಮುಂದೆ ತೆರೆದಿಡುತ್ತವೆ.

ಮನುಷ್ಯರು ಕೆಲವೊಮ್ಮೆ ಎಷ್ಟೊಂದು ಕ್ರೂರಿಗಳು ಊಹಾತ್ಮಕ ಪ್ರವೃತ್ತಿಯವರು ಆಗಿರುತ್ತಾರೆ ಎಂಬುದು ಚೆನ್ನಣ್ಣ ವಾಲೀಕಾರರ ಕೃತಿಗಳಲ್ಲಿ ಪ್ರತಿಫಲನಗೊಳ್ಳುತ್ತವೆ. ಆತನ ಸ್ವಾರ್ಥ ಕೀಳರಿಮೆ ದನ ದಾಹದಿಂದಾಗಿ ಆತ ಎಂತಹ ನೀಚ ಕೃತ್ಯಗಳನ್ನು ಮಾಡುತ್ತಾನೆ ಎಂಬುದೇ ಇವರ ಕಾದಂಬರಿಗಳು ಗಮನಾರ್ಹವಾಗಿದೆ. ಚೆನ್ನಣ್ಣ ವಾಲೀಕಾರರ *ಒಂದು ಹೆಣ್ಣಿನ ಒಳಜಗತ್ತು, ಕೋಟೆ ಬಾಗಿಲು, ಹುಲಿಗೆಮ್ಮ, ಗ್ರಾಮ ಭಾರತ, ಬೆಳ್ಳ* ಕಾದಂಬರಿಗಳ ವಸ್ತುವನ್ನು ಗಮನಿಸಿದಾಗ ಸಾರಾ ಅಬೂಬಕರ್ ಅವರ ಮಾತು ಸತ್ಯವೆನಿಸುತ್ತದೆ. ಹೈದರಾಬಾದ್ ಕರ್ನಾಟಕ ಕಾದಂಬರಿಕಾರರು ತಮ್ಮ ಕೌಟುಂಬಿಕ ಜೀವನಾನುಭವ ಲೋಕಾನುಭವಗಳಿಂದಲೂ ತಮ್ಮ ಕಾದಂಬರಿಗಳಿಗೆ ಜೀವ ತುಂಬಿದ್ದಾರೆ. ನವೋದಯದ ಆದರ್ಶ, ಪ್ರಕೃತಿ, ವರ್ಣನೆ, ಮೌಲ್ಯ ಪರಿಕಲ್ಪನೆ ಎಲ್ಲವೂ ಒಂದೊಂದು ಓದುಗರಿಗೆ ದಾರಿದೀಪವಾಗಿವೆ. ಸಮಕಾಲಿನ ವ್ಯವಸ್ಥೆಯಲ್ಲಿ ಕಾದಂಬರಿಕಾರರು ಬರೆದ ಕಾದಂಬರಿಗಳಲ್ಲಿ ಮಹಿಳೆಯರ ನೋವು ತಲ್ಲಣಗಳನ್ನು ಮಹಳೆಯರೇ ಗುರುತಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಕಾದಂಬರಿಕಾರರು ಹೊಸಗನ್ನಡ ಸಾಹಿತ್ಯದ

ಚಳುವಳಿಗಳಿಂದ ಪ್ರೇರಿತರಾದರೂ ಅವರ ಕಾದಂಬರಿಗಳಲ್ಲಿ ವಿಕಾಸಗೊಂಡಿರುವುದು ತಾಯಿನಾಡಿನ ನೆಲದ ವಾಸ್ತವತೆ. ಅವರ ಕಾದಂಬರಿಗಳಲ್ಲಿ ತತ್ವವಿದೆ, ಸತ್ವವಿದೆ, ಮಹತ್ವವಿದೆ ಹಾಗೂ ಸಾಮಾಜಿಕ ಶೋಷಣೆಯ ವಿವಿಧ ಮುಖಗಳ ಚಿತ್ರಣವಿದೆ. ಆದ್ದರಿಂದಲೇ ಚೆನ್ನಣ್ಣ ವಾಲೀಕಾರರು ಶಕ್ತಿಶಾಲಿ ಕಾದಂಬರಿಕಾರರಲ್ಲಿ ಪ್ರಮುಖರಾಗಿ ಗುರುತಿಸಿಕೊಳ್ಳುತ್ತಾರೆ.

**ಚೆನ್ನಣ್ಣ ವಾಲೀಕಾರ ಅವರ ಕುರಿತು**

ಚೆನ್ನಣ್ಣ ವಾಲೀಕಾರರು ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲೂಕಿನ ಶಂಕರವಾಡಿಯಲ್ಲಿ ಎಪ್ರೀಲ್ 6, 1943 ರಂದು ಧೂಳಪ್ಪ ಸಾಬಮ್ಮ ದಂಪತಿಗಳ ನಾಲ್ಕನೆಯ ಮಗನಾಗಿ ಜನಿಸಿದ ಶ್ರೀಯುತರು ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ಅಕ್ಕ ಸಾವಿತ್ರಮ್ಮನ ಆರೈಕೆಯಲ್ಲಿ ಬೆಳೆದಿದ್ದಾರೆ. ವಾಲೀಕಾರರಿಗೆ ಗ್ರಾಮೀಣ ಪರಿಸರವೇ ಅಪಾರ ಅನುಭವವನ್ನು ತಂದುಕೊಟ್ಟಿದೆ, ಶಂಕರವಾಡಿ, ನಾಲ್ವರ್, ಶಹಬಾದಗಳಲ್ಲಿ ಬಾಲ್ಯದ ವಿದ್ಯಾಭ್ಯಾಸ, ಕಲಬುರ್ಗಿಯಲ್ಲಿ ಮಾಧ್ಯಮಿಕ ಹಾಗೂ ಕಾಲೇಜು ವಿದ್ಯಾಭ್ಯಾಸ ಪೂರೈಸಿಕೊಂಡು 1965ರಲ್ಲಿ ಶಿಕ್ಷಕ ವೃತ್ತಿಗೆ ನೇಮಕಗೊಂಡು ಶೈಕ್ಷಣಿಕ ಸೇವೆಗೆ ತೊಡಗಿಕೊಂಡಿದ್ದಾರೆ. 1971ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಸ್ನಾತ್ತಕೋತ್ತರ ಪದವಿ ಪೂರೈಸಿಕೊಂಡು ರಾಯಚೂರಿನ ಎಲ್‌ವಿಡಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿ, 1987ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವಾಚಕರಾದರು. ನಂತರ 1995ರಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಪ್ರಸಾರಾಂಗ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಚೆನ್ನಣ್ಣ ವಾಲೀಕರ ಅವರ ಕಾದಂಬರಿಗಳ ಕೃಷಿ**

ಚೆನ್ನಣ್ಣ ವಾಲೀಕಾರ್ ಅವರು ತಮ್ಮ ಕಾದಂಬರಿಗಳಲ್ಲಿ ತಳವರ್ಗದ ತಲ್ಲಣಗಳು ಮೇಲ್ವರ್ಗದ ಶೋಷಣೆಯ ವಿವಿಧ ಮುಖಗಳು ಹೆಣ್ಣಿನ ಒಳಜಗತ್ತಿನ ವ್ಯವಹಾರಗಳು ಕುರಿತು ಚಿತ್ರಣ ನೀಡಿದ್ದು ತಮ್ಮ ಜೀವನಾನುಭವ ಹಾಗೂ ಲೋಕಾನುಭವಗಳನ್ನು ಕ್ರೋಡಿಕರಿಸಿ ಕಾದಂಬರಿಗಳನ್ನು ಬರೆದಿದ್ದಾರೆ ಯಾವುದನ್ನು ಮುಚ್ಚಿಡದೆ ಯಾವುದಕ್ಕೂ ಮುಜುಗರ ಪಡದೆ ಅವರು ಬರೆದ ಕಾದಂಬರಿ ಗಳಿಗೆ ಪ್ರಾದೇಶಿಕತೆಯ ವಾಸ್ತವಿಕತೆಯ ಸೊಗಡು ಕಾಣುವಂತದ್ದು. ಗುಲ್ಬರ್ಗ ಸುತ್ತಮುತ್ತಲಿನ ಪರಿಸರದ ಭಾಷೆ ಗಮನಸೆಳೆದರೂ ಅರ್ಥೈಸಿಕೊಳ್ಳುವುದು ಕಗ್ಗಂಟಾಗಿದೆ. ಅವರ ಪ್ರಾರಂಭದ ಕಾದಂಬರಿಗಳು ಪ್ರೀತಿ–ಪ್ರೇಮ ಪ್ರಣಯಗಳ ಸುತ್ತ ಗಿರಿಕಿ ಹೊಡೆದಿದೆ. ಒಂದು ಹೆಣ್ಣಿನ ಒಳ ಜಗತ್ತು, ಕೋಟೆಬಾಗಿಲು, ಹುಲಿಗೆಮ್ಮ, ಗ್ರಾಮಭಾರತ, ಬೆಳ್ಳ ಇತ್ಯಾದಿ ಕಾದಂಬರಿಗಳು ಓದುಗ ಹಾಗೂ ಸಹೃದಯದಲ್ಲಿ ಹುಟ್ಟುಹಾಕುವ ಚಿಂತನೆಗಳು, ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು ಅಧ್ಯಯನಕ್ಕೆ ಯೋಗ್ಯವಾಗಿವೆ.

**ಪ್ರಭುತ್ವ ಮತ್ತು ಪ್ರತಿರೋಧಕ್ಕೆ ಕಾರಣವಾಗುವ ಸಂಗತಿಗಳು**

ಹೆಣ್ಣನ್ನು ಭೋಗದ ವಸ್ತುವನ್ನಾಗಿ ಕಾಣದೆ ದುಡಿಯುವ ಸಾಧನವಾಗಿ, ಮಾರಾಟವಾದ ವಸ್ತುವಾಗಿ ಕುಟುಂಬ ಶೋಭಿತ ಗೊಂಬೆಯಂತೆ ಕಾಣುತ್ತಿರುವ ಪುರುಷವರ್ಗದ ಹಿತಾಸಕ್ತಿಯ ವಿರುದ್ಧ ಚೆನ್ನಣ್ಣ ವಾಲಿಕರ್ ಅವರು ಹರಿಹಾಯ್ದಿದ್ದಾರೆ. ಒಂದು ಹೆಣ್ಣಿನ ಒಳ ಜಗತ್ತು ಕಾದಂಬರಿಯ ನಾಯಕಿ ರತ್ನ

ಮದುವೆಯಾದ ಹೊಸತರಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ, ಉಳ್ಳವರ ತಿಕ್ಕಲುತನಗಳು ಏನೇ ಇದ್ದರೂ ರತ್ನಳ ಗಂಡ ಕೊಲೆಯಾಗಿ ಸಮಸ್ಯೆ ಉಲ್ಬಣಗೊಂಡಾಗ ರತ್ನ ದೈಹಿಕವಾಗಿ ಮಾನಸಿಕವಾಗಿ ತೊಳಲಾಡುವ ಅವಳ ಮೇಲೆ ನಿಗಾ ಇಟ್ಟ ಅವಳ ಅಣ್ಣ, ಅವಳು ನಿಸರ್ಗ ಸಹಜ ಬಯಕೆಗಳಿಗೆ ಬೆಲೆ ಕೊಡದೆ ಆಕೆ ಆಳಿನೊಡನೆ ಸಂಪರ್ಕ ಬೆಳೆಸಿದಾಗ, ಅವಳನ್ನೇ ಕೊಲೆಗೈಯುವ ಕ್ರೌರ್ಯದ ಸಂಕೇತವಾಗಿ ಬಂದಿದೆ. ಕೋಟೆಬಾಗಿಲು ಕಾದಂಬರಿ ಮೇಲ್ಜಾತಿಯವರು ಕೆಳಜಾತಿಯವರನ್ನು ತಮ್ಮ ಇಚ್ಛೆಗೆ ತಕ್ಕಂತೆ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಎತ್ತಿ ತೋರುತ್ತದೆ. ಇಲ್ಲಿ ಬರುವ ಕೆಳಜಾತಿಯವರು ಹೆಂಗಸರು ಮೇಲ್ವರ್ಗದವರ ಭೋಗದ ವಸ್ತುವಾಗಿಯೇ ಬಳಕೆ ಯಾಗಿದ್ದಾರೆ. ರಾಯಣ್ಣನ ಅಕ್ಕನ ಮೇಲೆ ನಡೆದ ಅತ್ಯಾಚಾರಕ್ಕೆ ಸೇಡು ತೀರಿಸಿಕೊಳ್ಳಲು ಯತ್ನಿಸುವುದು ಕುಲಕರ್ಣಿ ಅಂತಹ ಚಾಲಾಕಿ ಜನ ಅದನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಗಮನಾರ್ಹವಾಗಿದೆ. ವರ್ಗ, ವರ್ಣ, ಅಧಿಕಾರದ ಬಲದಿಂದ ಮೇಲ್ವರ್ಗದವರು ನೀಡುವ ಶೋಷಣೆಗೆ ಶಿಕ್ಷಣ, ಸಂಘಟನೆ, ಹೋರಾಟದ ಬಲದಿಂದ ಕೆಳವರ್ಗದವರು ಅವರಿಗೆ ಪಾಠ ಕಲಿಸಬೇಕೆಂಬ ಕಾದಂಬರಿಕಾರನ ಆಶಯ ಇಲ್ಲಿ ಪ್ರಸ್ತುತವೆನಿಸುತ್ತದೆ.

ರಾಯಚೂರಿನ ಕೋಟೆ ಕೃಷ್ಣದೇವರಾಯನ ಸೈನಿಕರ ಸಾಹಸದ ಬಗ್ಗೆ ವಾಲೀಕಾರರು ಕೊಡುವ ವಿವರಣೆಗಳು ಕುತೂಹಲ ಹುಟ್ಟಿಸುತ್ತವೆ. ಕಾದಂಬರಿ ಬೆಳೆದಂತೆ ವರ್ಣ–ವರ್ಗ ಅಧಿಕಾರದ ಕೋಟೆಗಳನ್ನು ನಾಶಪಡಿಸಲಾಗಿದೆ. ಮನುಷ್ಯನ ನಡಾವಳಿಗಳು ಎಷ್ಟೊಂದು ಅಪಾಯಕಾರಿ ಎಂಬುದನ್ನು ಕಾದಂಬರಿಕಾರ ಪ್ರತಿರೋಧದ ನೆಲೆಗಳನ್ನು ಪ್ರಭುತ್ವದ ಗಮನಕ್ಕೆ ತಂದಿದ್ದಾರೆ. ಚೆನ್ನಣ್ಣ ವಾಲೀಕಾರ ಅವರ ಮಾನವೀಯ ಕಾಳಜಿಗಳು ಮುಗ್ಧರಿಗೆ ಬರುವ ಅನಾವಶ್ಯಕ ತೊಂದರೆಗಳು ಬಡತನದ ವಾಸ್ತವದ ಹರಿವಿನಲ್ಲಿ ಹವ್ಯಾಸಗಳಿಂದ ಹೊರ ಬರಲಾಗದಂತೆ ತಲುಪಿರುವ ಜನಸಾಮಾನ್ಯರ ಕುರಿತಾದ ಹುಲಿಗೆಮ್ಮ, ಕಾದಂಬರಿಯಲ್ಲಿ ಕೆಳಜಾತಿಯ ಸುಂದರಿಯೊಬ್ಬಳ ಗೋಳಿನ ಕಥೆಯನ್ನು ಬಿಚ್ಚಿಡುತ್ತದೆ. ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಕೆಳವರ್ಗದವರಲ್ಲೂ ತಿರಸ್ಕೃತಳಾಗಿದ್ದ ಳು ಎಂಬುದಕ್ಕೆ ಇಲ್ಲಿ ನಿದರ್ಶನವಿದೆ. ಕೈಹಿಡಿದ ಗಂಡ ಅವಳನ್ನು ಕೈಬಿಡುವ ನಲ್ಲದೆ ಗರ್ಭಪಾತವಾಗಿ ಅವಳು ಕೊಳ್ಳಲಾಗುವುದು ಬೇರೆ ಊರಿಗೆ ಹೋಗಿ ಬದುಕು ಸಾಗಿಸಲು ಕೂಲಿನಾಲಿ ಮಾಡಿಕೊಂಡು ಬದುಕು ಸಾಗಿಸುತ್ತಾಳೆ. ಆಗ ಕೈಹಿಡಿದ ಕೂಲಿಗಾರರನ್ನು ಜೊತೆ ಸೇರಿ ಜೀವನ ನಡೆಸಲು ಮುಂದಾದಾಗ ಅವಳ ಜೀವನ ರುಚಿಕಂಡ ಯಜಮಾನರುಗಳು ಆಕೆಯನ್ನು ಹೇಗೆ ಹಿಂಬಾಲಿಸುತ್ತಾರೆ ಎಂಬುದು ವಾಸ್ತವದ ಕ್ರೂರತೆ ಮತ್ತು ಯಜಮಾನಿಕೆಯ ದರ್ಪ ಮತ್ತು ದೌರ್ಜನ್ಯವನ್ನು ತೆರೆದಿಡುತ್ತದೆ. ಅವಳು ತನ್ನ ಕಾರ್ಮಿಕ ಪತಿಯೊಡನೆ ಜೀವನ ಸಾಗಿಸಲು ಬಿಡದೆ ಆಕೆಯ ಎರಡನೇ ಪತಿಯನ್ನು ಹೇಗೆ ಕೊಲ್ಲುತ್ತಾರೆ ಎಂಬುದನ್ನು ಕಾದಂಬರಿಕಾರರು ಗ್ರಾಮೀಣ ಜನರ ಕ್ರೌರ್ಯದ ಮುಖಗಳನ್ನು ಪರಿಚಯಿಸುತ್ತಾರೆ.

ಗ್ರಾಮ ಭಾರತ ಕಾದಂಬರಿ ಕೂಡ ಮನುಷ್ಯನ ಅಸೂಯೆ, ದ್ವೇಷ, ಸಣ್ಣತನ ಹಾಗೂ ಸಂಕುಚಿತ ಭಾವನೆಗಳಿಂದ ತುಂಬಿದ ಮೇಲ್ವರ್ಗದವರ ನಡಾವಳಿಯನ್ನು ಕಣ್ಮುಂದೆ ತರುತ್ತದೆ. ವಾಲಿಕಾರರ ಎಲ್ಲಾ ಕಾದಂಬರಿಗಳ ಸಮಸ್ಯೆ ಇರುವುದೇ ಹೆಣ್ಣಿನ ಸುತ್ತಮುತ್ತಲಿರುವ ಶೋಷಣೆಯಲ್ಲಿ ಮಾಡಲು ಬೇರೆ ಕೆಲಸವಿಲ್ಲದೆ ಕಾಮುಕತನ ಕ್ಕಾಗಿ ದ್ವೇಷದ ದಳ್ಳುರಿ ಒತ್ತಿಸಿಕೊಂಡು ಪೊಲೀಸರು ಕೋರ್ಟು –ಕಚೇರಿ ಎಂದಲ್ಲ ಅಲೆದಾಡುವ ಇಲ್ಲಿಯ ಗಂಡಸರು ಮಾನವೀಯತೆ ಇಲ್ಲದ ದುಷ್ಟರು ಅವರು ಗ್ರಾಮ ಪಂಚಾಯಿತಿ

ಚುನಾವಣೆಯಲ್ಲಿ ಗೆದ್ದು ಬಂದರು, ಮೇಲ್ವರ್ಗದವರು ಅಧೀನದಲ್ಲಿ ಕೆಲಸ ಮಾಡಬೇಕಾಗಿ ಬರುವುದು ಅವರ ಪಾಲಿಗೆ ನುಂಗಲಾರದ ತುತ್ತು ಧರ್ಮ–ದೇವರು ಜಾತಿಯತೆಯ ಹೆಸರಿನಲ್ಲಿ ಇಲ್ಲಿಯ ಹೆಣ್ಣುಗಳು ಸ್ವಂತಿಕೆಯಿಲ್ಲದ ನಲುಗುವುದು ಶೋಚನೀಯವಾಗಿದೆ. ಚೆನ್ನಣ್ಣ ವಾಲೀಕಾರ ಅವರ ಕಾದಂಬರಿಗಳಲ್ಲಿ ಬದುಕಿನ ಸಂಕೀರ್ಣತೆಗಳಿವೆ. ಎಲ್ ಎಸ್ ಶೇಷಗಿರಿ ರಾವ್ ಅವರು "ಒಂದು ಕೃತಿ ಎಷ್ಟು ಉನ್ನತಿಯನ್ನು ಸಾಧಿಸುತ್ತದೆ ಎಂಬುದು ಅವರ ಸಂಕೀರ್ಣತೆಯನ್ನು ಅವಲಂಬಿಸುತ್ತದೆ" ಎಂಬ ಮಾತು ಚೆನ್ನಣ್ಣ ವಾಲೀಕಾರರ ಕಾದಂಬರಿಗಳಿಗೂ ಅನ್ವಯಿಸುತ್ತದೆ. ಕಾದಂಬರಿಗಳಲ್ಲಿ ಹಲವಾರು ಸಂಗತಿಗಳಿಂದ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು ವ್ಯಕ್ತವಾಗುತ್ತದೆ. ಅವರು ಸ್ತ್ರೀ ವಾದದ ಚಿಂತಕರಾಗಿ ಮಹಿಳಾ ಸ್ವಾತಂತ್ರ್ಯ ಹಾಗೂ ಸಮಾನತೆಯ ಭದ್ರತೆಗಳ ಕುರಿತು ಚಿಂತನೆ ನಡೆಸಿದ್ದಾರೆ. ಆದರೆ ದೇವನೂರು ಮಹಾದೇವರ ಕುಸುಮಬಾಲೆಯಂತೆ ತಾಂತ್ರಿಕ ಪರಿಣಿತಿ ಸಾಧಿಸಲಾಗಿಲ್ಲ. ಅವರ ಸಮುದಾಯದವರೇ ಬೆಳ್ಯನನ್ನು ಶೋಷಿಸುವ ರೀತಿ ಚಿಂತನೆಗೀಡು ಮಾಡುತ್ತದೆ. ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಕೆಳವರ್ಗದ ಜನತೆಗೆ ವರ್ಗಾವಣೆಯಾದಾಗ ಸ್ವಾರ್ಥ ರೂಪದಲ್ಲಿ ಮಾಡಿಕೊಳ್ಳುವ ಕಟುಸತ್ಯವನ್ನು ದಗದಗಿಸುವ ಅವರ ಕಾದಂಬರಿಗಳು ಸಮರ್ಥವಾಗಿ ಅಭಿವ್ಯಕ್ತಿಸುತ್ತವೆ. ವಾಲೀಕಾರರು ಸ್ತ್ರೀವಾದದ ಚಿಂತಕರಾಗಿ ಮಹಿಳಾ ಸ್ವಾತಂತ್ರ್ಯ ಹಾಗೂ ಸಮಾನತೆಯ ಭದ್ರತೆಗಳ ಕುರಿತ ಚಿಂತನೆ ಅವರ ಕಾದಂಬರಿಗಳ ಉದ್ದಕ್ಕೂ ಗಮನಸೆಳೆಯುತ್ತದೆ.

**ಉಪಸಂಹಾರ**

ಹೈದರಾಬಾದ್ ಕರ್ನಾಟಕದ ಕಾದಂಬರಿಯಲ್ಲಿ ಹೊಸಗನ್ನಡದ ಸಮೃದ್ಧ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಒಂದಾಗಿದ್ದು, ಅಲ್ಲಿ ಕಾಣಿಸಿಕೊಳ್ಳುವ ರಸ ವಿಚಾರಗಳು ವಿರಸ ಭಾವನೆಗಳು ವರ್ಗಹೋರಾಟದ ಪರಿಕಲ್ಪನೆಗಳು ಸಮಾನತೆಯ ಆಶಯಗಳು ಓದುಗರನ್ನು ಚಿಂತನೆಗೀಡು ಮಾಡುತ್ತವೆ. ಗಂಡು ಮೆಟ್ಟಿನ ನಾಡಾದ ಕಲ್ಬುರ್ಗಿಯ ಭಾಷೆಯಲ್ಲಿ ಬರೆದಿರುವ ಚೆನ್ನಣ್ಣವಾಲೀಕಾರ ಕಾದಂಬರಿಗಳಲ್ಲಿನ ಮಾತುಗಳಿಗೆ ಅನ್ವಯವಾಗುತ್ತವೆ. ಅವರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಪ್ರಭುತ್ವ ಮತ್ತು ಪ್ರತಿರೋಧದ ನೆಲೆಗಳು ಪ್ರಜಾಸತ್ತಾತ್ಮಕ ನಿಲುವುಗಳಿಗೆ ಬದ್ಧವಾಗಿದೆ. ಭಾಷೆ ಅತಿಶಯದ ರಂಜನೆಯ ಹೊರತಾಗಿಯೂ ಅವರ ಕಾದಂಬರಿಗಳ ಭಾಷೆ ಮೌಲ್ಯಗಳಿಂದಾಗಿ ಡಾ. ಚೆನ್ನಣ್ಣ ವಾಲೀಕಾರರು ಮಾನವರ ಪರ ಕಾಳಜಿವುಳ್ಳ ಸಾಮಾಜಿಕ ಚಿಂತಕರಾಗಿ, ಸೃಜನಶೀಲ ಕಾದಂಬರಿಕಾರರಾಗಿ ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತರಾಗುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಕರೀಗೌಡ ಬೀಚನಹಳ್ಳಿ. (ಸಂ.) (2004). ಕಥನ ಕಲೆಯ ನೆಲೆಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಚೆನ್ನಣ್ಣ ವಾಲೀಕಾರ. (2002). ವಾಲಿಕಾರರ ಸಮಗ್ರ ಕಾದಂಬರಿಗಳು. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗ.

- ಶಿವಾನಂದ ಬೇಕಲ್. (ಸಂ.) (2005). ಸಾಹಿತ್ಯ ಸಮೀಕ್ಷೆ. ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ.
- ಶ್ರೀಶೈಲ ನಾಗರಾಳ (1990). ಹೈದರಾಬಾದ್ ಕರ್ನಾಟಕ ಲೇಖಕರು. ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.
- ಸುರೇಂದ್ರಕುಮಾರ್ ಕೆರಮಗಿ. (2017). ಹೈದರಾಬಾದ್ ಕರ್ನಾಟಕದ ಕಾದಂಬರಿಕಾರರು. ಸೃಷ್ಟಿ ಸೌರಭ ಪ್ರಕಾಶನ, ಕಲಬುರ್ಗಿ.